ರೂಪಾಯಿಗಳ ಅಧಿಕ ವೆಚ್ಚ ಬರಬಹುದೆಂದು ತಿಳಿದು ಬಂದಿದೆ. ಕೋಟ್ಯಾಂತರ ರೂಪಾಯಿಗಳಷ್ಟು ವಾರ್ಷಿಕ ಆದಾಯ ವೆಚ್ಚವಿರುವ ಕ. ವಿ. ವಿ. ಗೆ ಇದು ಭಾರವೇನಲ್ಲ. ಕರ್ನಾಟಕ ವಿ. ವಿ. ಯ ತೋಟ ಹಾಗೂ ಆದರ ಆವರಣ ಅಚ್ಚುಕಟ್ಟುತನಕ್ಕೆ ಹೆಸರಾಗಿ ಆದೊಂದು ಪ್ರೇಕ್ಷಣೀಯ ಸ್ಥಳವಾಗಿದೆ ಯೆಂದರೆ ಅತಿಶಯೋಕ್ತಿಯೇನಲ್ಲ, ಅಲ್ಲಿಯ ಸಸ್ಯ ಶಾಸ್ತ್ರ ವಿಭಾಗದ ತೋಟವಂತೂ ಮಾದರಿಯಾಗಿದೆ. ಇದೆಲ್ಲ ಆಗಲು ಪರಿಶ್ರಮ ವಹಿಸುತ್ತಿರುವ ಕಾರ್ಮಿಕರ ಸ್ಥಿತಿಗತಿಗಳು ಮಾತ್ರ ಶೋಚನೀಯವಾಗಿದೆ. ಕಾರ್ಮಿಕರ ಅಸಂತೋಷದಿಂದಾಗಿ ಸದ್ಯ ವಿ. ವಿ. ಆವರಣದಲ್ಲಿ ಪ್ರಕ್ಷಬ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ಕಾರಣ ಮೇಲ್ಕಂಡ ಕಾರ್ಮಿಕರನ್ನು ಮಾಲಿಗಳ ಅಥವಾ ಗಾರ್ಡನರ್ ಹುದ್ದೆಗೆ ಏರಿಸಿ, ಅವರ ಸೇವೆಯನ್ನು ಖಾಯಂಗೊಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ಈ ಧಾರವಾಡ ವಿಶ್ವವಿದ್ಯಾಲಯದಲ್ಲಿ ದಿನಗೂಲಿ ಕೆಲಸ ಮಾಡತಕ್ಕವರು ಇಲ್ಲ, ದಿನಗೂಲಿ ಕೆಲಸ ಮಾಡತಕ್ಕವರು ಬೇರೆ ವಿಶ್ವವಿದ್ಯಾಲಯದಲ್ಲಿ ಇದ್ದಾರೆ. ವಿಶ್ವವಿದ್ಯಾಲಯದ ಎಲ್ಲಾ ವೈಸ್ ಛಾನ್ಸಲರುಗಳಿಗೂ ತಿಳಿಸಿದ್ದೇನೆ. ಇಂಟರ್ ಯೂನಿವರ್ಸಿಟಿ ಬೋರ್ಡ್ ಮಿಟಿಂಗ್ ಆಗುತ್ತದೆ. ಆ ಮಿಟಿಂಗ್‌ನಲ್ಲಿ ಚರ್ಚೆ ಮಾಡುತ್ತೇನೆ. ಈ ದಿನಗೂಲಿ ಕೆಲಸಗಾರರು ಎಲ್ಲಾ ಇಲಾಖೆಗಳಲ್ಲೂ ಇದ್ದಾರೆ. ಅವರು ಅಜಿಟೇಷನ್ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡರೆ ವಿಶ್ವವಿದ್ಯಾನಿಲಯದವರಿಗೂ ಅನುಕೂಲವಾಗುತ್ತದೆ. ಇದು ಸರ್ಕಾರದ ಮುಂದೆ ಇದೆ. ಈ ಪ್ರಶ್ನೆಯ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

(೧೭) ಪ್ರತಿಭಾವಂತ ಕಲಾವಿದರಿಗೆ ಸರ್ಕಾರದಿಂದ ಮಾಸಾಶನವನ್ನು ಕೊಡುವ ಬಗ್ಗೆ

ಶ್ರೀ ಡಿ.ಟಿ. ಜಯಕುಮಾರ್.—ಕರ್ನಾಟಕ ಸರ್ಕಾರ ಪ್ರತಿವರ್ಷ, ಕಲಾಕ್ಷೇತ್ರದಲ್ಲಿ ವಿಶೇಷ ಗಣನೀಯ ಸೇವೆ ಸಲ್ಲಿಸಿದ ಪ್ರತಿಭಾವಂತ ಹಿರಿಯರಿಗೆ, ಅವರ ಜೀವನೋಪಾಯಕ್ಕೆ ಅನುಕೂಲವಾಗಲೆಂದು ಮಾಸಾಶನವನ್ನು ಮಂಜೂರು ಮಾಡುತ್ತಿದ್ದು, ಅಂತರ ಆಯ್ದ ಪಟ್ಟಿಯು ಪ್ರತಿವರ್ಷ ನಡೆಯುವ ನವೆಂಬರ್ ೨ರ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಕಟಿಸಿ, ಅಂತಹ ಮಹನೀಯರಿಗೆ ಸರ್ಕಾರ ಧನಸಹಾಯ ಮಾಡುತ್ತಿತ್ತು. ಆದರೆ ಈ ಸಾರಿಯ ಪಟ್ಟಿಯನ್ನು ಕನ್ನಡ ರಾಜ್ಯೋತ್ಸವ ನಡೆದು ನಾಲ್ಕು ತಿಂಗಳಾದರೂ ಪ್ರಕಟಿಸಿಲ್ಲ. ಆದ್ದರಿಂದ ದಯಮಾಡಿ ಘನಸರ್ಕಾರದವರು ಆದಷ್ಟು ಬೇಗ ಈ ಪಟ್ಟಿಯನ್ನು ಬಿಡುಗಡೆ ಮಾಡಿ, ಕಷ್ಟದಿಂದ ಜೀವನ ನಡೆಸುತ್ತಿರುವ ಈ ಬಡ ಕಲಾವಿದರ ನೆರವಿಗೆ ಬರಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಸಾಹಿತ್ಯ, ಸಂಗೀತ, ನಾಟಕ, ನೃತ್ಯ, ಜಾನಪದ ಹಾಗೂ ಚಿತ್ರಕಲೆ ಈ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕಷ್ಟ ಪರಿಸ್ಥಿತಿಯಲ್ಲಿರುವ ಕಲಾವಿದರಿಗೆ ಮಾಹೆಯಾನ ರೂ. ೧೫೦-೦೦ ಮಾಸಾಶನ ನೀಡಲಾಗುತ್ತಿದೆ. ಈ ರೀತಿ ಮಾಸಾಶನ ಮಂಜೂರು ಮಾಡುವಾಗ ೫೮ ವರ್ಷ ವಯಸ್ಸಾಗಿರುವ ಮತ್ತು ವರ್ಷಕ್ಕೆ ಆದಾಯ ರೂ. ೧,೮೦೦-೦೦ ಒಳಗಿರುವ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗುತ್ತಿದೆ. ಅಲ್ಲದೆ ಅಂಗವಿಕಲರ ಕಲಾವಿದರ ವಯಸ್ಸು ೪೦ ವರ್ಷಗಳಾಗಿದ್ದು ಹಾಗೂ ೨೦ ವರ್ಷಗಳ ಸೇವೆ ಸಲ್ಲಿಸಿದ್ದರೆ ಅಂತಹ ಕಲಾವಿದರಿಗೂ ಮಾಸಾಶನ ಮಂಜೂರು ಮಾಡಲಾಗುವುದು.

ಪ್ರತಿ ವರ್ಷದಂತೆ ಈ ವರ್ಷವೂ ಮಾಸಾಶನ ಗೌರವಧನ ಮಂಜೂರಾತಿ ಕೋರಿ ಅರ್ಜಿಗಳು ಕಲಾವಿದರಿಂದ ಬಂದ ಹಾಗೂ ರಾಜ್ಯದ ಜಿಲ್ಲಾಧಿಕಾರಿಗಳಿಂದಲೂ ಶಿಫಾರಸ್ಸು ಮಾಡಲ್ಪಟ್ಟ ಅರ್ಜಿಗಳನ್ನು ಸಂಬಂಧಪಟ್ಟ ಅಕಾಡೆಮಿಗಳೊಡನೆ ಸಮಾಲೋಚಿಸಿದ ನಂತರ ಪರಿಗಣಿಸಿದ ಒಂದು ಪಟ್ಟಿಯನ್ನು ತಯಾರಿಸಿ ಅಂತಿಮ ಆದೇಶ ಹೊರಡಿಸುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

(೧೮) ಕಲಬುರ್ಗಿ ತಾಲ್ಲೂಕಿನಲ್ಲಿ ಬಾಲವಾಡಿ ಆರ್ಗನೈಜರ್ಸ್ ಮತ್ತು ಆಟೆಂಡರುಗಳಿಗೆ ೧೯೮೨ರ ಪರಿಷ್ಕೃತ ವೇತನ ನೀಡದಿರುವುದು

ಶ್ರೀ ಎಸ್.ಕೆ. ಕಾಂತಾ.—ಕಲಬುರ್ಗಿ ತಾಲ್ಲೂಕ್ ಟಿ.ಡಿ.ಬಿ. ಬಾಲವಾಡಿ ಆರ್ಗನೈಜರ್ಸ್ ಮತ್ತು ಆಟೆಂಡರುಗಳಿಗೆ ಇಮವರೆಗೆ ೧೯೭೭ ಹಾಗೂ ೧೯೮೨ರ ಪರಿಷ್ಕೃತ ವೇತನ ಶ್ರೇಣಿ ನೀಡದಿರುವ ಮತ್ತು ಅವರನ್ನು ಖಾಯಂ ಮಾಡದಿರುವ ಬಗ್ಗೆ.

ಟಿ.ಡಿ.ಬಿ. ಯಿಂದ ನಡೆಯುತ್ತಿರುವ ಬಾಲವಾಡಿ ಕೇಂದ್ರಗಳಿಗೆ ಆರ್ಗನೈಜರ್ ಹಾಗೂ ಆಟೆಂಡರ್‌ಗಳನ್ನು ರೂ. ೯೦ರಿಂದ ೨೦೨ ವರೆಗೆ ಮಾತ್ರ ಸೀಮಿತ ಇರುವ ವೇತನ ಶ್ರೇಣಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಇದೇ ಹುದ್ದೆಯಲ್ಲಿರುವ (ಆಳಂದ ತಾಲ್ಲೂಕು) ವರಿಗೆ ೧೨೦೦ ವೇತನ ಕೊಡುತ್ತಲಿದ್ದು ಆದರೆ ಉಳಿದ ತಾಲ್ಲೂಕಿನ ಟಿ.ಡಿ.ಬಿ. ಆರ್ಗನೈಜರ್ ಅವರಿಗೆ ಕಡೆಗಣಿಸಲಾಗಿದೆ.

ಈ ವಿಷಯದ ಬಗ್ಗೆ ಕಡೆಗಣಿಸಲಾದ ಟಿ.ಡಿ.ಬಿ. ಆರ್ಗನೈಜರ್‌ಗಳನ್ನು ಸೂಕ್ತವಾದ ವೇತನ ಮತ್ತು ಅವರನ್ನು ಎಂದು ಖಾಯಂ ಮಾಡಲಾಗುವುದು ಎಂಬ ಬಗ್ಗೆ ಗ್ರಾಮೀಣ ಅಭಿವೃದ್ಧಿ ಮತ್ತು ಮಂಡಲ್ ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ,—ಅಧ್ಯಕ್ಷರೆ, ಈ ವಿಚಾರವನ್ನು ಗ್ರಾಮೀಣ ಅಭಿವೃದ್ಧಿ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ (ಸದಸ್ಯರು ಗೈರು ಹಾಜರಾಗಿದ್ದಾರೆ).—

(೧೯) ಮಂಗಳೂರಿನಲ್ಲಿರುವ ಬಲ್ಮಠ ರಸ್ತೆಯನ್ನು ದ್ವಿಮುಖ ರಸ್ತೆಯೆನ್ನಾಗಿ ಮಾರ್ಪಡಿಸುವುದು

ಶ್ರೀ ಬಿ.ಎಂ. ಇದಿನಬ್ಬ.—ಮಂಗಳೂರು ಬಲ್ಮಟ ರಸ್ತೆಯನ್ನು ಈಗ ಏಳೆಂಟು ತಿಂಗಳುಗಳಿಂದ ಒನ್‌ವೇ ಮಾಡಿರುತ್ತಾರೆ. ಹಂಪನಕಟ್ಟೆಯಿಂದ ಹೋಗುವ ವಾಹನಗಳೆಲ್ಲಾ ಬಾವಟೆಗುಡ್ಡೆಯ ರಸ್ತೆಯಿಂದ ಹೋಗಿ, ಬರುವ ವಾಹನಗಳು ಬಲ್ಮಟ ರಸ್ತೆಯಿಂದ ಬರುವಂತೆ ನಿಗದಿ ಮಾಡಿರುತ್ತಾರೆ. ಇದರಿಂದಾಗಿ ಸರ್ವ ರಿಕ್ಷಾದವರಿಗೆ, ಟ್ಯಾಕ್ಸಿಯವರಿಗೆ ತುಂಬಾ ಕಷ್ಟವಾಗಿರುತ್ತದೆ. ಎಲ್ಲಾ ತರದ ವ್ಯಾಪಾರ ವಹಿವಾಟು ಇರುವ ಬಲ್ಮಟ ರಸ್ತೆಗೆ ಬರಲು ಸುತ್ತು ಹಾಕಿ ಬಳಸಿಕೊಂಡು ಹೋಗಬೇಕು. ಅಲ್ಲದೆ ಬಾವಟೆಗುಡ್ಡೆ ರಸ್ತೆಯಲ್ಲಿ ಕಸ್ತೂರ್ ಬಾ ಮೆಡಿಕಲ್ ಕಾಲೇಜು ಇದ್ದು, ಅಲ್ಲಿಯ ವಿದ್ಯಾರ್ಥಿಗಳಿಗೆ ಸದ್ದುಗದ್ದಲ, ಶಾಕೂರ್ ಪಾರ್ಕ್‌ನವರಿಗೆ ಸದ್ದುಗದ್ದಲ. ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿ ಈದ್‌ಗಾವಂದಿರ ಇದ್ದು, ಪ್ರಾರ್ಥನೆಗೆ ಬರುವವರಿಗೆ ಭಾರಿ ಸದ್ದು ಗದ್ದಲವಾಗಿ ತುಂಬಾ ತೊಂದರೆಯಾಗಿರುತ್ತದೆ. ಈದ್‌ಗಾದ ಎದುರು ಬಸ್‌ಸ್ಟಾಪ್ ಮಾಡಿ ತುಂಬಾ ಗಲಾಟೆಯಾಗುತ್ತಿದೆ. ಆದಕಾರಣ ಬಾವಟೆಗುಡ್ಡೆಗೆ ವಾಹನಗಳು ಹೋಗದೆ, ಮೊದಲಿನಂತೆಯೇ ಬಲ್ಮಟ ರಸ್ತೆಯಲ್ಲಿ ಹೋಗುವುದು ಬಾರೀ ಉಪಕಾರ: ರಿಕ್ಷಾ, ಟ್ಯಾಕ್ಸಿಯವರಿಗೂ ತುಂಬಾ ಉಪಕಾರವಾಗುತ್ತದೆ. ಈ ಒನ್‌ವೇ ರದ್ದುಪಡಿಸಿ ಉಪಕರಿಸುವುದು ಅಗತ್ಯ. ಈ ಕುರಿತು ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಂಗಳೂರಿನ ಬಲ್ಮಟ ರಸ್ತೆಯನ್ನು ಆ ಜಿಲ್ಲೆಯ ರೋಡ್ ಸೇಫ್‌ಟಿ ಕಮಿಟಿಯ ಶಿಫಾರಸ್ಸಿನ ಮೇಲೆ ''ಒನ್‌ವೇ'' ಎಂದು ಘೋಷಿಸಿ ಮಂಗಳೂರಿನ ಜಿಲ್ಲಾ ನ್ಯಾಯಾಧೀಶರು ಆದೇಶವನ್ನು ಹೊರಡಿಸಿರುತ್ತಾರೆ. ಅಲ್ಲಿನ ಅಧಿಕ ವಾಹನ ಸಂಚಾರದಿಂದ ಈ ಕ್ರಮ ಅಗತ್ಯವಾಗಿದೆ.

(೨೦) ವಿಧಾನಸೌಧದೊಳಗೆ ಬರಲು ಜಿಲ್ಲಾಪರಿಷತ್ ಸದಸ್ಯರಿಗೆ ಗುರುತಿನ ಚೀಟಿ ನೀಡುವುದು

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ ಸದಸ್ಯರುಗಳು ಸಾರ್ವಜನಿಕ ಕೆಲಸಗಳ ನಿಮಿತ್ತ ಬೆಂಗಳೂರಿಗೆ ಬಂದು, ವಿಧಾನಸೌಧದಲ್ಲಿ ಸಚಿವರೊಡನೆ ಅಥವಾ ಅಧಿಕಾರಿಗಳೊಡನೆ ಚರ್ಚಿಸುವ ಅಗತ್ಯಗಳಿರಬಹುದು. ಅಂಥ ಸದಸ್ಯರುಗಳು ತಮ್ಮ ಗುರುತಿನ ಚೀಟಿ ತೋರಿಸಿದಾಗ ಅವರನ್ನು ವಿಧಾನಸೌಧದ ಒಳಗೆ ಬಿಡುವ ಅವಕಾಶವನ್ನು ಕಲ್ಪಿಸಬೇಕು. ಅಂತೆಯೇ ವಿಧಾನ ಮಂಡಲದ ಕಲಾಪಗಳು ನಡೆಯುತ್ತಿರುವ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಗೂ ಸಹ ಗುರುತಿನ ಚೀಟಿ ತೋರಿಸಿ, ಹೋಗಲು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಖಾತೆ ಸಚಿವರು).—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟವರಿಗೆ ಆದೇಶ ನೀಡುತ್ತೇವೆ.